KAMD720018912024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ**

**ಸಿ.ಸಿ.ನಂ. 1095/2024**

ದಿಃ **04.08.2026**

ಪಿರ್ಯಾದುದಾರರುಃ- ಶ್ರೀಮತಿ ರತ್ನಮ್ಮ ಕೋಂ ಲೇಟ್ ರಘುರಾಮ್
ವಯಸ್ಸು 46 ವರ್ಷ,
ವಾಸಃ ಬಸವನಗುಡಿ ಬೀದಿ, ಮಹದೇವಪುರ ಗ್ರಾಮ,
ಶ್ರೀರಂಗಪಟ್ಟಣ ತಾಲ್ಲೂಕು,ಮಂಡ್ಯ ಜಿಲ್ಲೆ.

-ವಿರುದ್ಧ-

ಆರೋಪಿಃ- ರಾಮು ವಿ.ಟಿ. ಬಿನ್ ಲೇಟ್ ತಿಮ್ಮಯ್ಯ ವಿ.
ವಾಸಃ ಮನೆ ನಂ.504, ಬೆಸ್ತರ ಬೀದಿ,
ಚಾಮರಾಜ ಜೋಡಿ ರಸ್ತೆ, ಮೈಸೂರು.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಃ- ಈ ಮೊಕದ್ದಮೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?**

**ಉ ಃ**

ಪ್ರ.**1:-** ಪ್ರಾಸಾ1 ಶ್ರೀಮತಿ ರತ್ನಮ್ಮ ಇವರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ನೀವು ಪಿರ್ಯಾದುದಾರರಿಂದ ನಿಮ್ಮ ದರದು ನಿಮಿತ್ತ ಅಂದರೆ ಗೃಹಕೃತ್ಯದ ಖರ್ಚಿಗಾಗಿ ಹಾಗೂ ಕೈ ಸಾಲ ತೀರಿಸುವ ಸಲುವಾಗಿ ಹಾಗೂ ಕಾನೂನುಬದ್ಧ ಅವಶ್ಯಕತೆಗಳಿಗಾಗಿ ಸೆಪ್ಟೆಂಬರ್ -2023 ರ ಮೊದಲನೇ ವಾರದಂದು ರೂ.9,50,000/-( ಒಂಬತ್ತು ಲಕ್ಷದ ಐವತ್ತು ಸಾವಿರ ರೂಪಾಯಿಗಳು) ಗಳನ್ನು ಸಾಲವಾಗಿ ಕೇಳಿದ್ದು , ಅದರಂತೆ ಸೆಪ್ಟೆಂಬರ್ -2023 ರ ಎರಡನೇ ವಾರದಂದು ರೂ.9,50,000/-( ಒಂಬತ್ತು ಲಕ್ಷದ ಐವತ್ತು ಸಾವಿರ ರೂಪಾಯಿಗಳು) ಸಾಲವಾಗಿ ಪಡೆದುಕೊಂಡು, ಸದರಿ ಸಾಲದ ಹಣವನ್ನು 3 ತಿಂಗಳ ಒಳಗಾಗಿ ಮರುಪಾವತಿಸುವುದಾಗಿ ಹೇಳಿದ್ದು, ಪಾವತಿಸದ ಕಾರಣ ಪಿರ್ಯಾದುದಾರರು ನಿಮ್ಮನ್ನು ಸಾಲದ

KAMD720018912024

ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ನಿಮ್ಮ ಖಾತೆಯುಳ್ಳ ಬ್ಯಾಂಕ್ ಆಫ್ ಬರೋಡ , ಜೆ.ಎಲ್.ಬಿ. ರಸ್ತೆ, ಮೈಸೂರು ಶಾಖೆಗೆ ಸೇರಿದ ಚೆಕ್ ಸಂಃ 000839 ದಿನಾಂಕಃ 02.01.2024 ಎಂದು ನಮೂದಿಸಿ ರೂ.9,50,000/- ಮೊತ್ತ ನಮೂದು ಮಾಡಿ ಚೆಕ್ಕನ್ನು ನೀಡಿ, ಸದರಿ ಚೆಕ್ಕನ್ನು ಬ್ಯಾಂಕಿಗೆ ನಗಧೀಕರಣಗೊಳಿಸಲು ತಿಳಿಸಿದ್ದೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉಃ

ಪ್ರ.2- ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ನೀಡಿದ್ದ ಚೆಕ್ಕನ್ನು ಪಿರ್ಯಾದುದಾರರು ಅವರು ಖಾತೆ ಹೊಂದಿರುವ ಬ್ಯಾಂಕ್ ಆಫ್ ಇಂಡಿಯಾ, ಮಹದೇವಪುರ ಶಾಖೆ, ಶ್ರೀರಂಗಪಟ್ಟಣ ಮೂಲಕ ನಗದೀಕರಿಸಲು ಪಿರ್ಯಾದಿ ದಿನಾಂಕಃ 06.01.2024 ರಂದು ಹಾಜರುಪಡಿಸಿದಾಗ, ಸದರಿ ಬ್ಯಾಂಕಿನವರು ದಿಃ 08.01.2024 ರಂದು ಆರೋಪಿಯಾದ ನಿಮ್ಮ ಬ್ಯಾಂಕ್‌ನಲ್ಲಿ "ಸಾಕಷ್ಟು ಹಣವಿಲ್ಲ" (Funds Insufficient) ಎಂಬ ಹಿಂಬರಹದೊಂದಿಗೆ ಪಿರ್ಯಾದುದಾರರಿಗೆ ಚೆಕ್ ಅನ್ನು ವಾಪಸ್ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉಃ

ಪ್ರ.3ಃ- ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವರು ಚೆಕ್ಕು ನಗದೀಕರಣವಾಗದೇ ಇದ್ದುದ್ದರಿಂದ ನಿಮ್ಮನ್ನು ಭೇಟಿ ಮಾಡಿ ಚೆಕ್ ನಗಧಿಕರಣವಾಗದೆ ಇರುವ ಬಗ್ಗೆ ತಿಳಿದ್ದು ನಂತರ, ಪಿರ್ಯಾದುದಾರರು ಅವರ ವಕೀಲರ ಮೂಲಕ ಸದರಿ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ದಿನಾಂಕಃ25.01.2024 ರಂದು ನಿಮ್ಮ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ನೋಟೀಸು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

ಉಃ

ಪ್ರ.4:-ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ನೋಟೀಸು ದಿನಾಂಕ 29.01.2024 ರಂದು ನಿಮಗೆ ಜಾರಿಯಾಗಿರುತ್ತದೆ. ಅದರೂ ಸಹ ನೀವು ಚೆಕ್ಕನ ಬಾಬ್ತು ಹಣವನ್ನಾಗಲಿ ಪಾವತಿ ಮಾಡಿರುದಿಲ್ಲ, ನೋಟೀಸಿಗೆ ಯಾವುದೇ ಪ್ರತ್ಯುತ್ತರವನ್ನು ನೀಡದೆ ಹಾಗೂ ಚೆಕ್ ನ ಅಡಿಯಲ್ಲಿ ಕೊಡಬೇಕಾದ ಯಾವುದೇ ಹಣವನ್ನು ವಾಪಸ್ ಕೊಟ್ಟಿಲ್ಲ

KAMD720018912024

ಎಂದು ಹೇಳಿ ನೀವು ಪಿರ್ಯಾದುದಾರರಿಗೆ ನಿಮ್ಮ ಖಾತೆಯಲ್ಲಿ ಹಣವಿಲ್ಲವಿರುವುದೂ ಗೊತ್ತಿದ್ದರೂ ಸಹ ಚೆಕ್ ನೀಡಿ ವಂಚಿಸಿರುತ್ತೀರಿ ಎಂದು ನುಡಿದಿರುತ್ತಾರೆ ಸಾಕ್ಷ್ಯ. ಇದಕ್ಕೆ ನೀವೇನು ಹೇಳುವಿರಿ?

ಉಃ

ಪ್ರ.5:- ಸದರಿ ಸಾಲದ ತೀರುವಳಿಗಾಗಿ ನೀವು ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡ , ಜೆ.ಎಲ್.ಬಿ. ರಸ್ತೆ, ಮೆಸೂರು ಶಾಖೆಗೆ ಸೇರಿದ ಚೆಕ್ ಸಂಃ 000839 ದಿನಾಂಕಃ 02.01.2024 ರೂ.9,50,000/- ಗಳಿಗೆ ನಮೂದಿಸಿ ನೀಡಿರುವ ನಿಪಿ 1 ಚೆಕ್ ನಿಮ್ಮದೆ?

ಉಃ

ಪ್ರ.6:- ಸದರಿ ಸಾಲದ ತೀರುವಳಿಗಾಗಿ ನೀವು ಖಾತೆ ಹೊಂದಿರುವಬ್ಯಾಂಕ್ ಆಫ್ ಬರೋಡ , ಜೆ.ಎಲ್.ಬಿ. ರಸ್ತೆ, ಮೆಸೂರು ಶಾಖೆಗೆ ಸೇರಿದ ಚೆಕ್ ಸಂಃ 000839 ದಿನಾಂಕಃ 02.01.2024 ರೂ.9,50,000/- ಗಳಿಗೆ ನಮೂದಿಸಿ ನೀಡಿರುವ ನಿಪಿ 1 ರಲ್ಲಿರುವ ಚೆಕ್ಕಿನ ಸಹಿ ನಿಮ್ಮದೆ?

ಉಃ

ಪ್ರ.7:- ಸದರಿ ಸಾಲದ ತೀರುವಳಿಗಾಗಿ ನೀವು ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡ, ಜೆ.ಎಲ್.ಬಿ. ರಸ್ತೆ, ಮೆಸೂರು ಶಾಖೆಗೆ ಸೇರಿದ ಚೆಕ್ ಸಂಃ 000839 ದಿನಾಂಕಃ 02.01.2024 ರೂ.9,50,000/- ಗಳಿಗೆ ನಮೂದಿಸಿ ನಿಪಿ 1 ಚೆಕ್ ಅನ್ನು ನೀವು ಪಿರ್ಯಾದಿಗೆ ನೀಡಿರುವಿರಾ?

ಉಃ

ಪ್ರ.8:- ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ರಾಜಿ ಮಾಡಿಕೊಳ್ಳಲು ಇಚ್ಚಿಸುವಿರಾ?

ಉಃ

KAMD720018912024

ಪ್ರ.9:- ಈ ಕೇಸಿನ ಬಗ್ಗೆ ನೀವು ಇನ್ನೂ ಹೇಳುವುದು ಏನಾದರೂ ಇದೆಯಾ?

ಉಃ

ಪ್ರ.9:- ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ? ಅವರ ವಿಚಾರಣೆ ಆಗಬೇಕೆ?

ಉಃ

ಪ್ರ.11:-ನಿಮ್ಮ ಪರ ದಾಖಲೆಗಳು ಏನಾದರೂ ಇದೆಯಾ? ಅವುಗಳನ್ನು ಹಾಜರುಪಡಿಸಿಸುವಿರಾ?

ಉಃ

ಮೇಲ್ಕಂಡ ಸಾಕ್ಷಿದಾರರ ಹೇಳಿಕೆಗಳನ್ನು ತೆರೆದ ನ್ಯಾಯಲಯದಲ್ಲಿ ನನ್ನ ಎದುರು ಆರೋಪಿಗೆ ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ ಹೇಳಲಾಗಿದೆ ಹಾಗೂ ಆರೋಪಿ ಹೇಳಿದ ಉತ್ತರಗಳನ್ನು ಯಥವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

(ಉಮೇಶ.ಎಂ.ಪಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ,ಶ್ರೀರಂಗಪಟ್ಟಣ.

ಆರೋಪಿ ಸಹಿಃ